KARNATAKA LEGISLATIVE ASSEMBLY

Thursday, 21st March, 1974/Phalguna 30-1895 Sk.

The House met in the Assembly Chamber, Vidhana Soudha, at One of the Clock.

Madam Speaker (Smt. K. S. NAGARATHNAMMA) *in the Chair.*

STARRED QUESTIONS
(TO WHICH ORAL ANSWERS WERE GIVEN)

PLYING OF BUSES ON SOME ROUTES FROM SIRUGUPPA

201. Sri B. E. RAMAIAH (Siruguppa)—

Will the Minister for Transport and Housing be pleased to state:—

whether the Government has received any representation from the Public and the M.L.A. of Siruguppa Taluk (constituency) for plying of buses on the following routes and if so, the action the Government has taken for complying with the request—

(i) from Bellary to Siruguppa *via* Talur and Karur,
(ii) from Siruguppa to K. Belgal *via* Raravi,
(iii) Siruguppa to Gangavathi *via* Sindhnoor,
(iv) Siruguppa to Bangalore *via* Bellary (Night service),
(v) Bellary to Manthralaya. Andhra Pradesh,
(vi) Bellary to Thirupathi ?

Sri K. H. RANGANATH (Minister for Transport and Housing).—

(i) Yes. Representation has been received from Sri B. E. Ramaiah. Service has been provided.

(ii) Yes. Representations have been received from Sri B. E. Ramaiah, M.L.A. and Sri V. Nagappa, M.L.A. The service will be started after the road is made motorable.

(iii) Yes. Representation has been received from Sri B. E. Ramaiah. This will be considered when the Raichur scheme is taken up for implementation.

(iv) Yes Representation has been received from Sri B. E. Ramaiah. This is found not feasible as there is no appreciable direct traffic.

(v) and (vi) Yes. Representation has been received from Sri B. E. Ramiah. These are Inter-State routes allotted to Andhra Pradesh operators as per Inter-State Agreement, which is under consideration of the Government of Karnataka.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಎರಡನೇಯ ಪ್ರಶ್ನೆಗೆ ಉತ್ತರವಾಗಿ "ರಸ್ತೆಯು ಮೋಟಾರು ಸಂಚಾರಕ್ಕೆ ಯೋಗ್ಯವಾದ ನಂತರ ಬಸ್ಸು ಸೌಕರ್ಯವನ್ನು ಒದಗಿಸಲಾಗುವುದು" ಎಂದು ಹೇಳಿದ್ದೀರಿ. ಆದರೂ ಇಂಥ ಕಚ್ಚಾ ರಸ್ತೆಯಲ್ಲಿ ಬಸ್ಸುಗಳು ಓಡಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ತಮ್ಮ ಕೆ. ಎಸ್. ಆರ್. ಟಿ. ಸಿ. ಬಸ್ಸನ್ನು ಓಡಿಸುವುದಕ್ಕೆ ಸಾಧ್ಯವಾಗದೇ ಇದ್ದರೆ ಖಾಸಗಿಯವರು ಬಸ್ಸುಗಳನ್ನು ಓಡಿಸುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಉತ್ತರದಲ್ಲಿಯೇ ಹೇಳಿದೆ, ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ಅನುಕೂಲವಾದ ರಸ್ತೆ ಇದ್ದರೆ ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(iii)ನೆಯದಕ್ಕೆ ಉತ್ತರವಾಗಿ, "ರಾಯಚೂರು ಯೋಜನೆ, ಯನ್ನು ಜಾರಿಗೊಳಿಸುವುದನ್ನು ಕೈಕೊಂಡ ನಂತರ ಇದನ್ನು ಪರಿಶೀಲಿಸಲಾಗುವುದು" ಎಂದ ಹೇಳಿದ್ದೀರಿ, ರಾಯಚೂರು ಯೋಜನೆಗೂ ಇದಕ್ಕೂ ಏನೂ ಸಂಬಂಧವಿಲ್ಲ, ಜನರ ಓಡಾಟ ಹೆಚ್ಚು ಆಗಿರುವದರಿಂದ ಮೇನ್ ರೋಡ್ ಇರುವುದರಿಂದ, ಪರ್ಮಿಟ್ ತೆಗೆದುಕೊಂಡು ಬಸ್ಸುಗಳನ್ನು ಓಡಿಸಬಹುದು. ಅದಕ್ಕೆ ಏನು ತೊಂದರೆ ಇದೆ ?

Sri K. H. RANGANATH—I want notice.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(iv)ನೇ ಪ್ರಶ್ನೆಗೆ ಉತ್ತರವಾಗಿ ಪ್ರಯಾಣಿಕರ ಸಂಖ್ಯೆ ಕಡಿಮೆ ಇದೆ ಎಂದು ಹೇಳಿದ್ದೀರಿ. ಬಳ್ಳಾರಿಯಲ್ಲಿ ಹಾಲ್ಟ್ ಮಾಡುವ ಬಸ್ಸುಗಳನ್ನು ಸಿರುಗುಪ್ಪದಲ್ಲಿ ಹಾಲ್ಟ್ ಮಾಡು ಮಂಥ ಯೋಜನೆ ಮಾಡುತ್ತಿರಾ ?

ಶ್ರೀ ಕೆ. ಎಚ್. ರಂಗನಾಥ್.—ಸಿರುಗುಪ್ಪದಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರ ಸಂಖ್ಯೆ ಕಡಿಮೆ ಇರುವುದರಿಂದ, ಎಕನಾಮಿಕಲ್ ಆಗಿ ಇಲ್ಲಿ ಎಂಬ ದೃಷ್ಟಿಯಿಂದ ಬಿಡಲಾಗಿದೆ. ಎಕನಾಮಿಕ್ ಫಿಜಿಬಿಲ್ ಆಗಿದ್ದರೆ ನೇರವಾಗಿ ಓಡಿಸಬಹುದು. ಬಳ್ಳಾರಿಯಲ್ಲಿ ನಿಲ್ಲಿಸುವುದನ್ನು ಸಿರುಗುಪ್ಪದಲ್ಲಿ ನಿಲ್ಲಿಸಿದರೆ ಏನೂ ಉಪಯೋಗವಿಲ್ಲ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಆಂಧ್ರದ ಎರಡು ಪ್ರದೇಶಗಳಿಗೆ, ಅಂದರೆ ತಿರುಪತಿ, ಮಂತ್ರಾಲಯ ಬಹಳ ಮುಖ್ಯವಾದ ಯಾತ್ರಾ ಸ್ಥಳಗಳು, ಅಲ್ಲಿಗೆ ಬಸ್ಸುಗಳನ್ನು ಓಡಿಸುವುದಕ್ಕೆ ಆಂಧ್ರ ದವರು ಗೊತ್ತುಮಾಡಿದ್ದಾರೆ. ನಮ್ಮ ಸರ್ಕಾರದವರು ಬಸ್ಸುಗಳನ್ನು ಓಡಿಸುವುದಕ್ಕೆ ಕ್ರಮತೆಗೆದುಕೊಂಡಿಲ್ಲ, ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಎಚ್. ರಂಗನಾಥ್.—ಆಂಧ್ರ ಸರಕಾರಕ್ಕೂ ನಮಗೂ ಆಗಿರುವ ಅಗ್ರಿಮೆಂಟ್ ತಡೆ ಆಗಿರುವುದರಿಂದ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ. ಅದಕ್ಕೋಸ್ಕರ ನಿಧಾನವಾಗಿದೆ.

'C' TYPE BUS STAND at BELLATTI

221. Sri V. V. WAI (Shriahatti):—

Will the Minister for Transport and Housing be pleased to state:—

(*a*) whether it has come to the notice of the Government that 40-50 buses ply from Bellatti Bus Stand;